ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನಸಭೆ
ಒಂಭತ್ತನೇ ಅಧಿವೇಶನ

# ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2016
## (2016ರ ವಿಧಾನಸಭೆಯ ವಿಧೇಯಕ ಸಂಖ್ಯೆ – 05)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 9ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) 9ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಎಂಟನೇ ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"ಅಲ್ಲದೇ ಪರಂತು, ದಿನಾಂಕ 26.03.2015ರ ಸರ್ಕಾರದ ಆದೇಶ ಸಂಖ್ಯೆ ಟಿಡಿ 81 ಟಿಟಿಟಿ 2014ರಲ್ಲಿ ನಿರ್ದಿಷ್ಟಪಡಿಸಲಾದ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂತೆ ಕರ್ನಾಟಕ ಪ್ರವಾಸೋದ್ಯಮ ಕಾರ್ಯನೀತಿ, 2015-2020ರೊಂದಿಗೆ ಪರಿಭಾಷಿಸಿದಂತೆ ಬರೆದುಕೊಟ್ಟ ಅಥವಾ ಅನುಕೂಲಕರವಾಗುವ "ಅರ್ಹ ಅಸ್ತಿತ್ವಗಳಿಗೆ (eligible entities)" ಪ್ರವಾಸೋದ್ಯಮ ಕಾರ್ಯನೀತಿ 2015-2020ರಲ್ಲಿ ನಿರ್ದಿಷ್ಟಪಡಿಸಿದ ವ್ಯಾಪ್ತಿಯವರೆಗೆ ಅದರಲ್ಲಿ ನಿರ್ದಿಷ್ಟಪಡಿಸಬೇಕಾದ ಯಾವುದೇ ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸ್ಟಾಂಪು ಶುಲ್ಕವನ್ನು ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅಧಿಸೂಚನೆಯ ಮೂಲಕ 25.03.2020ರವರೆಗೆ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು."

# ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಪ್ರವಾಸೋದ್ಯಮ ಕಾರ್ಯನೀತಿ 2015–2020ರಲ್ಲಿ ಮಾಡಲಾದ ಪ್ರಸ್ತಾವಗಳಿಗೆ ಮತ್ತು ಪ್ರವಾಸೋದ್ಯಮ ಬೆಳವಣಿಗೆಗೆ ಉತ್ತೇಜನ ನೀಡುವುದಕ್ಕಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ವಿ. ಶ್ರೀನಿವಾಸ ಪ್ರಸಾದ್**
ಕಂದಾಯ ಸಚಿವರು

**ಎಸ್. ಮೂರ್ತಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**XXX**

**ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ, 34) ಉದ್ಧೃತ ಭಾಗ**

**Xxx xxx xxx**

9. **ಸುಂಕಗಳನ್ನು ಕಡಿಮೆ ಮಾಡಲು, ಮಾಫಿ ಮಾಡಲು ಅಥವಾ ಅವುಗಳ ಬಗ್ಗೆ ರಾಜಿಮಾಡಿಕೊಳ್ಳಲು ಅಧಿಕಾರ.**– (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ನಿಯಮ ಅಥವಾ ಆದೇಶದ ಮೂಲಕ,–

(ಎ) **Xxx xxx xxx**

ಅಲ್ಲದೇ ಪರಂತು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಿಂದ, ಅಧಿಸೂಚನೆಯ ಮೂಲಕ, ಅಧಿಸೂಚನೆ ಸಂಖ್ಯೆ ಆರ್‌ಡಿ 144 ಮುನೋಮು 2003 ದಿನಾಂಕ 23–04–2003ರಲ್ಲಿ ನಿರ್ದಿಷ್ಟಪಡಿಸಲಾದ ಲಿಖಿತಗಳ ಮೇಲೆ ಪಾವತಿಸಬೇಕಾದ ಸ್ಟ್ಯಾಂಪು ಸುಂಕವನ್ನು ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು.

**Xxx xxx xxx**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು. ಪಿ7. ಕಾಸೂ 1011, 1000–ಪ್ರತಿಗಳು 2ನೇ ಮಾರ್ಚ್, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**NINTH SESSION**

# THE KARNATAKA STAMP ( AMENDMENT) BILL, 2016

**(L.A. Bill No. 05 of 2016)**

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957), for the purposes hereinafter appearing;

Be it enacted by the Karnataka State Legislature in the sixty-seventh year of the Republic of India as follows:-

**1. Short title and commencement.**– (1) This Act may be called the Karnataka Stamp ( Amendment) Act, 2016.

(2) It shall come into force at once.

**2. Amendment of Section 9.**- In the Karnataka Stamp Act, 1957, (Karnataka Act 34 of 1957) in section 9, in sub-section (1), in clause (a), after the eighth proviso, the following shall be inserted, namely:-

"Provided also that the State Government may, in public interest, by notification till 25.03.2020 reduce or remit to the extent specified in the Tourism Policy 2015-2020 the stamp duty payable on any instrument executed by or in favour of the “eligible entities” as defined in connection with the Karnataka Tourism Policy, 2015-2020 specified in the Government Order No.TD 81 TTT 2014, dated 26.03.2015 or specified by the State Government from time to time. "

## ***STATEMENT OF OBJECTS AND REASONS***

It is considered necessary to amend the Karnataka Stamp Act, 1957 (Karnataka Act No. 34 of 1957) to give effect to the proposals made in the Karnataka Tourism Policy 2015-2020, and to give impetus to the growth in the Tourism Industry.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**V. SRINIVASA PRASAD**
Minister for Revenue

**S. MURTHY**
Secretary (I/C)
Karnataka Legislative Assembly

***ANNEXURE***

**EXTRACT FROM THE KARNATAKA STAMP ACT, 1957**
**(KARNATAKA ACT 34 OF 1957)**

**XX XX XX**

**9. Power to reduce, remit or compound duties.-** (1) The State Government may, by rule or order published in the official Gazette.

(a) XX XX

Provided also that, the State Government may, in public interest by notification reduce or remit stamp duty payable on instruments specified in notification No.RD 144 MuNoMu 2003 dated:23-04-2003.

**XX XX XX**

Government Press, Vikasa Soudha, Bengaluru, P7, W.D., Copies 1000, 2nd March, 2016